ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ    ದಿನಾಂಕ : DATE : 7/7/19

ಸ್ಪೀಕರ್ ನಡೆ ನಿಗೂಢ | ಶಾಸಕರು ಬ್ಲಾಕ್ಮೇಲ್ ಮಾಡ್ತಿದ್ದಾರೆ ಎಂದಿದ್ದ ರಮೇಶ್ ಕುಮಾರ್, ನಂತರ ರಾಜೀನಾಮೆ ಬಗ್ಗೆ ಸ್ಪಷ್ಟನೆ

# ರಾಜೀನಾಮೆ ಮಂಗಳವಾರ ಪರಿಶೀಲಿಸುವೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು 7/7/19

ಸಮ್ಮಿಶ್ರ ಸರ್ಕಾರದ ಹನ್ನೊಂದು ಶಾಸಕರು ನನ್ನ ಆಪ್ತ ಕಾರ್ಯದರ್ಶಿಗೆ ರಾಜೀನಾಮೆ ನೀಡಿದ್ದಾರೆ. ಈ ರಾಜೀನಾಮೆ ಪರಿಶೀಲಿಸುವ ಪ್ರಕ್ರಿಯೆಯನ್ನು ಮಂಗಳವಾರ ನಡೆಸಲಿದ್ದು, ಅನಂತರ ಈ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳುತ್ತೇನೆ ಎಂದು ಸ್ಪೀಕರ್ ಕೆ.ಆರ್. ರಮೇಶ್ ಕುಮಾರ್ ತಿಳಿಸಿದ್ದಾರೆ.

ಶನಿವಾರ ಬೆಳಗ್ಗೆ ಯಾವೊಬ್ಬ ಶಾಸಕರೂ ರಾಜೀನಾಮೆ ನೀಡುತ್ತಿಲ್ಲ, ಊಹಾಪೋಹ ಸೃಷ್ಟಿಸಿ ತಮ್ಮ ವ್ಯವಹಾರ ಮಾಡಿಕೊಳ್ಳಲು ಬ್ಲಾಕ್‌ಮೇಲ್ ತಂತ್ರ ಅನುಸರಿಸುತ್ತಿದ್ದಾರೆ ಎಂದು ಆರೋಪಿಸಿದ್ದ ರಮೇಶ್ ಕುಮಾರ್ ಅವರು ಸಂಜೆಯ ವೇಳೆಗೆ 11 ಮಂದಿ ಶಾಸಕರು ರಾಜೀನಾಮೆ ನೀಡಿದ್ದಾರೆ ಎಂದು ಸ್ಪಷ್ಟಪಡಿಸಿದರು. ಶನಿವಾರ ಸಂಜೆ ಇಂದಿರಾನಗರದ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಹನ್ನೊಂದು ಶಾಸಕರು ತಮ್ಮನ್ನು ಭೇಟಿಯಾಗಿ ರಾಜೀನಾಮೆ ಪತ್ರ ನೀಡಿದ್ದಾರೆ ಎಂದು ನನ್ನ ಆಪ್ತ ಕಾರ್ಯದರ್ಶಿ



ಮಾಹಿತಿ ನೀಡಿದ್ದಾರೆ. ಭಾನುವಾರ.. ರಜಾ ದಿನ ಹಾಗೂ ಸೋಮವಾರ ನನಗೆ ವೈಯಕ್ತಿಕ ಕೆಲಸ ಇರುವುದರಿಂದ ಮಂಗಳವಾರ ಪರಿಶೀಲನೆ ನಡೆಸುತ್ತೇನೆ ಎಂದು ಹೇಳಿದರು.

ಶನಿವಾರ ಬೆಳಗ್ಗೆ ಅತೃಪ್ತ ಶಾಸಕರು ರಾಜೀನಾಮೆ ನೀಡಲು ಬಂದ ಸಮಯದಲ್ಲೇ ಕಚೇರಿಯಿಂದ ಹೊರನಡೆದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಸಂಬಂಧಿಕರೊಬ್ಬರು ಕಾಯಿಲೆಗೆ ತುತ್ತಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರನ್ನು ನೋಡುವುದು ಬೇಡವೇ ಎಂದು ಪ್ರಶ್ನಿಸಿದರು. ಇನ್ನು ಮುಖ್ಯಮಂತ್ರಿಗಳ ಕತೆ ನನಗೆ ಗೊತ್ತಿಲ್ಲ ಎಂದರು.

**ಬ್ಲಾಕ್‌ಮೇಲ್ ತಂತ್ರ ಆಕ್ಷೇಪ:** ಅತೃಪ್ತ ಶಾಸಕರ ರಾಜೀನಾಮೆಗೂ ಮೊದಲು ಶನಿವಾರ ಬೆಳಗ್ಗೆ ವಿಧಾನಸೌಧದಲ್ಲಿ ಮಾತನಾಡಿದ ಅವರು, ಹದಿಮೂರು ಮಂದಿಯ ರಾಜೀನಾಮೆ ಅಲ್ಲ ಇಪ್ಪತ್ತು ಮಂದಿ ಬಂದು ಕೊಡಲಿ. ದೊಡ್ಡ ಮನುಷ್ಯರು ಬರುತ್ತಿದ್ದಾರೆ ಎಂದು ಕಾದು ಕೊಂಡು ಕೂರಲು ಆಗುವುದಿಲ್ಲ, ಸ್ಪೀಕರ್ ಕಚೇರಿ ಇದೆ, ಅದಕ್ಕೊಂದು ಪ್ರಕ್ರಿಯೆ ಇದೆ. ಶಾಸಕರು ರಾಜೀನಾಮೆ ನೀಡಬೇಕಿದ್ದರೆ ಫೋನ್ ಮಾಡಿ ಸ್ಪೀಕರ್ ಕಚೇರಿಯಲ್ಲೇ ಇದ್ದಾರೆಯೇ ಎಂದು ಕೇಳಿಕೊಳ್ಳಬೇಕು. ಯಾರೂ ಮಾಡಿಲ್ಲ, ಹೀಗಾಗಿ ಇದೊಂದು ಹೆದರಿಸಿ, ಬೆದರಿಸಿ ವ್ಯವಹಾರ ಮಾಡಿಕೊಳ್ಳುವ ಪ್ರಹಸನ ಎಂದು ಆರೋಪಿಸಿದ್ದರು.

ಬ್ಲಾಕ್‌ಮೇಲ್ ತಂತ್ರ, ಊಹಾ ಪೋಹಗಳನ್ನು ನೀವು ನಂಬುತ್ತಿದ್ದೀರಿ. ಯಾರೂ ನಂಬಬೇಡಿ, ನನ್ನನ್ನು ನಂಬಿ. ನೀವು ನಮ್ಮ ಮಕ್ಕಳ ವಯಸ್ಸಿನವರು. ನಿಮ್ಮನ್ನು ಅವಮಾನಿಸಲು ಇಷ್ಟಪಡುವುದಿಲ್ಲ. ನೀವು ಅರ್ಥ ಮಾಡಿಕೊಳ್ಳಬೇಕು. ಈ ರೀತಿ ಬ್ಲಾಕ್‌ಮೇಲ್ ಮಾಡುತ್ತಾ ಹೋದರೆ ಪ್ರಜಾಪ್ರಭುತ್ವ ಏನಾಗಬೇಕು? ಪ್ರಜಾಪ್ರಭುತ್ವಕ್ಕೆ ಇದು ಆರೋಗ್ಯಕರ ಬೆಳವಣಿಗೆ ಅಲ್ಲ ಎಂದು ಸ್ಪಷ್ಟಪಡಿಸಿದರು.

**ಆಡಿಯೋ ಪ್ರಕರಣದ ಬಗ್ಗೆ ಗೊತ್ತಿಲ್ಲ:** ಸ್ಪೀಕರ್ ವಿರುದ್ಧ ಹಣ ಪಡೆದಿರುವ ಆರೋಪ ಹೊಂದಿರುವ ಆಡಿಯೋ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಯಾರು ಅದನ್ನು ಹೇಳಿದ್ದಾರೋ ಅವರೇ ಸ್ಪಷ್ಟನೆ ನೀಡಬೇಕು. ಅದಕ್ಕೆ ತಳ ಬುಡ ಇದೆಯೇ? ನನಗಂತೂ ಆ ವಿಚಾರ ಗೊತ್ತಿಲ್ಲ. ಪ್ರಜಾಪ್ರತಿನಿಧಿಗಳಾದವರಿಗೆ ನಾವು ಏನು ಮಾತಾಡುತ್ತಿದ್ದೀವಿ, ಪರಿಣಾಮ ಏನಾಗಬಹುದು ಎಂಬ ಬಗ್ಗೆ ಯೋಚನೆಯೇ ಇಲ್ಲ, ನಾವೆಲ್ಲಾ ಜನಾಭಿಪ್ರಾಯಕ್ಕೆ ತಲೆಬಾಗಿ ನಡೆದವರು. ಇವರಿಗೆಲ್ಲರಿಗೂ ಜನರ ಬಗ್ಗೆ ಗೌರವವೇ ಇಲ್ಲದಿದ್ದರೆ ಹೇಗೆ ಎಂದರು.